"ಏನಪ್ಪಾ ಇಷ್ಟು ಬೇಗ ಮಲಗಿಬಿಟ್ಟಿದ್ದೀಯಾ? ಮುಖ ಒಂಥರಾ ಡಲ್ ಆಗಿದೆ ಇವೊತ್ತು. ಏನಾದರೂ ಅನೀಸಿ ಅನ್ನಿಸ್ತಿದಿಯಾ? ಏನೂಟ ಮಾಡ್ದೆ. ಡಾಕ್ಟರ್ ವಿಕ್ರಂಗೆ ಹೇಳ್ತಾ ಬಂದು ನೋಡ್ಕೊಂಡ್ ಹೋಗ್ತಾನೆ. ಅಲ್ಲಿ ಯಾರಿಗಾದರೂ ಮನೆ ಬಾಡಿಗೆಗೆ ಕೊಟ್ಟು ಇಲ್ಲಿಗೆ ಬಂದುಬಿಡು ಅಂದ್ರೆ ನೀನು ಕೇಳಲ್ಲ. ಇಲ್ಲಿ ನೋಡ್ಬೇಕು, ಇಂಡಿಯನ್ ಪೇರೆಂಟ್ಸ್ ಎಲ್ಲಾ ಸೇರಿಕೊಂಡು ಒಂದು ಸಂಘ ಮಾಡ್ಕೊಂಡು ಎಷ್ಟು ಹ್ಯಾಪಿಯಾಗಿದಾರೆ ಅಂತ. ಮೇಟ್ಸ್ ಇಲ್ಲದಿರುವ ವಯಸ್ಸಾಗಿರೋ ಗಂಡು ಹೆಣ್ಣುಗಳು ಸೇರಿ ಫ್ರೆಂಡ್‌ಶಿಪ್ ಮಾಡ್ಕೊಂಡು ಎಷ್ಟ್ ಲವ್ಲಿಯಾಗಿದಾರೆ ಗೊತ್ತಾ. ಅದರಲ್ಲಿ ಫಿಫ್ಟಿ ಪರ್ಸೆಂಟ್ ಇಂಡಿಯನ್ ಸೀನಿಯರ್ ಸಿಟಿಜನ್ಸ್ ಕೂಡಾ ಇದ್ದಾರೆ. ಯೂನಿವರ್ಸಿಟಿ ಪ್ರೊಫೆಸರ್ಸ್ ಅಂದ್ರೆ ಇಲ್ಲಿ ತುಂಬಾನೇ ರೆಸ್ಪೆಕ್ಟ್ ಗೊತ್ತಾ..." ಎಂದು ಒಂದೇ ಸಮನೆ ಮಾತನಾಡಿದ್ದ. ಮಗನ ಯಾವ ಮಾತಿಗೆ ಉತ್ತರಿಸಬೇಕೆಂದು ಋಗ್ವೇದಿಯವರಿಗೆ ಅರಿವಾಗದೆ ಕ್ಷಣ ಗೊಂದಲದಲ್ಲಿ ಬಿದ್ದರು. ನಂತರ ಸಾವರಿಸಿಕೊಂಡು, "ಅಂಥದ್ದೇನೂ ಇಲ್ಲವೋ ಚಕ್ರಪಾಣಿ. ಏನೋ ಓದ್ತಾ ಓದ್ತಾ ಹಾಗೆ ಜೊಂಪು ಹತ್ತಿತ್ತು. ನಿದ್ದೆಯಿಂದ ಎದ್ದಾಗ ಮನುಷ್ಯನ ಮುಖ ಡಲ್ ಆಗಿರೋದು ಕಾಮನ್ ಅಲ್ವಾ, ಇನ್ನೇನು ಡಾಕ್ಟರೋ ನೀನು ಪುಸ್ತಕದ ಬದನೆಕಾಯಿ. ಇವೊತ್ತು ಸಂಜೆ ಕ್ಲಬ್ಬಲ್ಲಿ ಸ್ವಿಮ್ಮಿಂಗ್ ಮಾಮೂಲಿಗಿಂತಲೂ ಹತ್ತು ನಿಮಿಷ ಜಾಸ್ತಿ ಮಾಡ್ದೆ." ಎಂದು ಸುಳ್ಳು ಹೇಳಿದ್ದರು ಋಗ್ವೇದಿ. ಇವೊತ್ತಿನ ಅವರ ಮುಖ ಭಾವಕ್ಕೆ ಬೇರೆಯದೇ ಕಾರಣವಿತ್ತು. "ಪ್ಲೀಸ್ ಟೇಕ್ ಕೇರ್ ಅಪ್ಪ, ಎರಡು ತಿಂಗಳಲ್ಲಿ ಬರ್ತೀವಲ್ಲ, ಆಗ ಡಿಸೈಡ್ ಮಾಡೋಣ." ಎಂದು ಫೋನ್ ಕಟ್ ಮಾಡಿದ್ದ. ಋಗ್ವೇದಿ ಬಿಸಿನೀರು ಅರ್ಧ ಗ್ಲಾಸ್ ಕುಡಿದು ರೀಸಸ್ ಮಾಡಿ ಬಂದು ಇನ್ನೇನು ಹಾಸಿಗೆಯ ಮೇಲೆ ಉರುಳಬೇಕು, ಮತ್ತೆ ಫೋನ್ ರಿಂಗಾಗಿತ್ತು; ವಾಟ್ಸ್‌ಆ್ಯಪ್ ಕಾಲ್. ಎರಡನೇ ಮಗ ಚಕ್ರವರ್ತಿ ಮಾಡುತ್ತಿದ್ದ. ಋಗ್ವೇದಿ ಸ್ಕ್ರೀನ್ ಸ್ವೈಪ್ ಮಾಡಿದಾಗ ಚಕ್ರವರ್ತಿ ಸ್ಕ್ರೀನ್ ಮೇಲೆ ಕಾಣಿಸಿಕೊಂಡು, "ಅಣ್ಣ ಫೋನ್ ಮಾಡಿದ್ದ, ನಂಗೂ ಭಯ ಆಯ್ತು. ಯಾವುದಕ್ಕೂ ಟೆನ್ಶನ್ ಮಾಡ್ಕೊಬೇಡಪ್ಪ. ಇಲ್ಲಿಗೆ ಬರೋದಾದ್ರೆ ಯೋಚ್ನೆ ಮಾಡು, ಇನ್ನೆಂಟು ದಿನದಲ್ಲೇ ಎಲ್ಲಾ ಅರೇಂಜ್ ಮಾಡ್ತೀನಿ. ಅಣ್ಣನ ಮನೆಯಲ್ಲೊಂದು ವಾರ, ಇಲ್ಲೊಂದು ವಾರ ಕಾಲ ಕಳೆದ್ರೂ ಆಯ್ತು." ಎಂದಿದ್ದ. ಋಗ್ವೇದಿ ತುಸು ಹುಸಿ ಕೋಪ ತೋರಿಸುತ್ತಾ, "ನನಗಿಂತಲೂ ನಿಮ್ಮಿಬ್ಬರಿಗೇ ಟೆನ್ಶನ್ ಜಾಸ್ತಿ ಇದೆ ಅನ್ನಿಸ್ತಿದೆ. ಯೋಚನೆ ಮಾಡೋದೇನಿದೆ, ನನ್ನ ಪಾಡಿಗೆ ನಾನು ಇಲ್ಲಿ ಆರಾಮಾಗಿದಿನಿ. ಇನ್ನು ಆ ಪರದೇಶಕ್ಕೆ ಬಂದು ನಿಮ್ಮಂತೆ ನಾನೂ ಪರದೇಶಿ ಆಗ್ಬೇಕೇನು. ಯೂ ಬೋತ್ ಡೋಂಟ್ ವರಿ ಅಬೌಟ್ ಮಿ." ಎಂದಿದ್ದರು. "ನಿನಗೆ ಯಾರಪ್ಪ ಹೇಳೋರು. ಪ್ರೊಫೆಸರುಗಳೇ ಹಾಗೆ, ಅವರೇಳಿದ್ದೆ ನಡಿಬೇಕು. ಇಲ್ಲಿನ ಕೆಲವು ಪ್ರೊಫೆಸರಗಳನ್ನೂ ನೋಡಿದ್ದೀನಿ. ಇಗೊ ಜಾಸ್ತಿ. ಎನಿವೇಸ್ ಟೇಕ್ ಕೇರ್ ಅಪ್ಪಾ, ಬೈ." ಎಂದು ಫೋನ್ ಇಟ್ಟಿದ್ದ. ಅಂದ ಹಾಗೆ ಚಕ್ರಪಾಣಿ ಮತ್ತು ಚಕ್ರವರ್ತಿ ಅವಳಿಜವಳಿಗಳು. ಚಕ್ರಪಾಣಿ ಐದು ನಿಮಿಷ ಮೊದಲು ಹುಟ್ಟಿದ್ದರಿಂದ ಅಣ್ಣನಾಗಿದ್ದ. ಚಕ್ರವರ್ತಿ ತಮ್ಮನಾಗಿದ್ದ. ಮಾಮೂಲಿ ಅವಳಿಜವಳಿಗಳಲ್ಲಿರುವಂತೆ ಚಕ್ರಪಾಣಿ, ಚಕ್ರವರ್ತಿ ಇಬ್ಬರಲ್ಲೂ ಒಂದೇ ರೀತಿಯ ಬುದ್ಧಿವಂತಿಕೆ ಮತ್ತು ಗುಣಲಕ್ಷಣಗಳಿದ್ದವು. ಋಗ್ವೇದಿಯವರು ಇಬ್ಬರನ್ನೂ ಶಿಸ್ತಿನಿಂದಲೇ ಬೆಳೆಸಿದ್ದರು.

ಋಗ್ವೇದಿಯವರು ಫೋನ್ ಸೋಫಾ ಮೇಲೆ ಇಡುವಾಗ, ಸೋಫಾದ ಪಕ್ಕದಲ್ಲಿಟ್ಟಿದ್ದ ಟೇಬಲ್ ಮೇಲಿದ್ದ ಹೆಂಡತಿಯ ಫೋಟೊ ಕಿಸಕ್ಕನೆ ನಕ್ಕಂತೆ ಭಾಸವಾಯಿತು. ಋಗ್ವೇದಿ ಹೆಂಡತಿಯ ಫೋಟೊವನ್ನು ಮತ್ತೊಮ್ಮೆ ಸ್ಪಷ್ಟವಾಗಿ ನೋಡಿದ್ದರು. ಅನೇಕ ವರ್ಷಗಳ ಕಾಲ ಟೈಮ್ ಟೈಮಿಗೆ ಸರಿಯಾಗಿ ರುಚಿ ರುಚಿಯಾದ ತಿಂಡಿ, ಅಡುಗೆ ಮಾಡಿಟ್ಟುಕೊಂಡು, ಹೇಳಿದ ಮಾತು ಕೇಳಿಕೊಂಡು ಚನ್ನಾಗಿದ್ದ ಹೆಂಡತಿ ಯಾವುದೇ ಮುನ್ಸೂಚನೆ ನೀಡದೆ ಹಾರ್ಟ್ ಅಟ್ಯಾಕ್ ಆಗಿ ಸತ್ತಾಗ ಮಕ್ಕಳಿಬ್ಬರೂ ಅಮೆರಿಕದಲ್ಲಿ ಇದ್ದರು. ಫೋನ್ ಮಾಡಿ ತಿಳಿಸಿದಾಗ ಅಮೆರಿಕದಿಂದ ಹೊರಟು